<u>ದಿನಾಂಕಃ 12.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಮುಂದುವರಿದ ಪಾಟೀಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಸಿವಿಎಸ್ ಅವರಿಂದ–</u>

8. ನಾನು ವಕೀಲ ವೃತ್ತಿಯನ್ನು ನಡೆಸುತ್ತಿದ್ದು, ನಾನು ಹಾಜರಾಗಿರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಡೈರಿ ಬರೆಯುತ್ತೀನಿ. ಸದರಿ ಡೈರಿ ಹಾಜರುಪಡಿಸಲು ತೊಂದರೆ ಇಲ್ಲ. ನಾನು ವಕೀಲ ವೃತ್ತಿ ಅಲ್ಲದೆ ವ್ಯವಸಾಯ ಮಾಡುತ್ತೇನೆ. ವ್ಯವಸಾಯವನ್ನು ಹಾಳುಗಳ ಸಹಾಯದಿಂದ ಮಾಡಿಸಿ ನನ್ನ ಹೆಂಡತಿ ಮೇಲುಸ್ತುವಾರಿ ವಹಿಸಿ ಅವರ ಜೊತೆ ಕೆಲಸ ನಿರ್ವಹಿಸುತ್ತಾರೆ. ನಾನು ಆರೋಗ್ಯವಾಗಿದ್ದಾಗ ಸ್ವತಃ ವ್ಯವಸಾಯ ಮಾಡುತ್ತಿದ್ದೆ. ಆ ಸಮಯದಲ್ಲಿ ನ್ಯಾಯಾಲಯಕ್ಕೂ ಬರುತ್ತಿದ್ದೆ.

9. ಬೆಳಿಗಿನ ಸಮಯದಲ್ಲಿ ಗದ್ದೆಗೆ ಹೋಗುತ್ತಿದ್ದೆ. 9.30 ಕ್ಕೆ ನನ್ನ ಕಚೇರಿಗೆ ಹೋಗುತ್ತಿದ್ದೆ. ನನ್ನ ಗದ್ದೆಯಲ್ಲಿ ನಾನು ಶುಂಠಿ, ಭತ್ತ ಹಾಗೂ ಜೋಳ ಬೆಳೆಯುತ್ತಿದ್ದೆ. ಭತ್ತದ ಬೆಳೆಗೆ ಪ್ರತಿನಿತ್ಯ ಮಾಡುವ ಕೆಲಸ ಇರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿದಿನ ನೀರು ಬಿಡುವುದು, ಕಳೆ ತೆಗೆಯುವುದು, ಸದರಿ ಬೆಳೆ ಕೂಯ್ಯುವ ಸಮಯ ಹಾಳುಗಳನ್ನು ಕರೆದುಕೊಂಡು ಬಂದು ಕೂಯಿಲು ಮಾಡಿಸುವ ಕೆಲಸ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

10. ಗದ್ದೆಗಳಲ್ಲಿ ಸಾಮಾನ್ಯವಾಗಿ ನೀರು ತಾನೇ ಹರಿದು ಬಂದು ಎಕ್ಸೆಸ್ ನೀರು ಅಟೋಮ್ಯಾಟಿಕ್ ಆಗಿ ಹರಿದು ಹೋಗುವ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಗದ್ದೆ ತುಂಬಿದ ಮೇಲೆ ಸದರಿ ನೀರು ಹರಿಯಲು ಒಂದು ಜಾಗ ಮಾಡಿದ್ದು, ಆ ಪ್ರಕಾರ ನೀರು ಹರಿದುಹೋಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

11. ನಾನು ಆಸ್ಪತ್ರೆಗೆ ದಿನಾಂಕ **29.02.2016** ದಾಖಲಾಗಿರುತ್ತೇನೆ. ದಿಃ **28.03.2016** ರಂದು ಡಿಸ್ಚಾರ್ಜ್ ಆಗಿರುತ್ತೇನೆ. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್

ಆಗುವಾಗ ಡಿಸ್ಚಾರ್ಜ್ ಸಮ್ಮರಿ ನೀಡಿರುತ್ತಾರೆ. ಅದು ನನ್ನ ಬಳಿ ಇದೆ, ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುತ್ತೇನೆ.

**12.** ಈ ಹಂತದಲ್ಲಿ ಸಾಕ್ಷಿದಾರರಿಗೆ ತಾನು ಹಾಜರುಪಡಿಸಿರುವ ದಾಖಲಾತಿಗಳನ್ನು ತೋರಿಸಿ, ಅದರಲ್ಲಿ ಡಿಸ್ಚಾರ್ಜ್ ಸಮ್ಮರಿ ಇದೆಯಾ ಎಂಬ ಪ್ರಶ್ನೆಗೆ ಅದರಲ್ಲಿ ಕಾಣುತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಬಳಿ ಇದ್ದಿದ್ದರೆ ಅದನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿ ಅದು ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ಅದು ಕಳೆದುಹೋಗಿರುತ್ತದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸದರಿ ದಾಖಲಾತಿ ಕಳೆದುಹೋಗಿದ್ದಕ್ಕೆ ಅದರ ಬೇರೆ ಪ್ರತಿ ಪಡೆಯಲು ಪ್ರಯತ್ನ ಪಟ್ಟಿದ್ದೇನೆ. ಆದರೆ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ.

13. ನಿಪಿ.19 ರಲ್ಲಿ ನಮೂದು ಮಾಡಿರುವ 5 ಐಟಂ ಗಳಿಗೆ ಒಂದೇ ಬೆಲೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ.19 ರಲ್ಲಿ ನಮೂದು ಮಾಡಿರುವ 5 ಐಟಂ ಗಳನ್ನು ಒಟ್ಟಾಗಿ ನೀಡುವುದಿಲ್ಲ , ಬೇರೆ ಬೇರೆಯಾಗಿ ಅಳವಡಿಸುವಾಗ ನೀಡುತ್ತಾರೆ ಎಂದರೆ ಸರಿಯಲ್ಲ.

14. ನಿಪಿ.19 ರಲ್ಲಿ ಟಿನ್ ನಂಬರ್ ನಮೂದಾಗಿರುವುದಿಲ್ಲ. ಅದನ್ನು ಅವರು ಮಾಡಬೇಕು ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನಿಪಿ.22,ರಲ್ಲಿ ಸಹ ಟಿನ್ ನಂಬರ್ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ.23 ರಲ್ಲಿ ದಿನಾಂಕ ನಮೂದಾಗಿರುವುದಿಲ್ಲ ಎಂದರೆ ಅವರು ಹಾಕಬೇಕಾಗಿತ್ತು ಆದರೆ ಹಾಕಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.23 ಅನ್ನು ನಾನು ಫಿಜಿಯೋಥೆರಪಿ ಮಾಡಿಸಿಕೊಂಡಾಗ ಪಡೆದಿರುತ್ತೇನೆ. ನಿಪಿ.23 ರಲ್ಲಿ ನಮೂದಾಗಿರುವ ದಿನಾಂಕ:11.05.2016 ಹಾಗೂ 22.06.2016 ನಾನೇ ಅಳವಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು

ಆಸ್ಪತ್ರೆಯವರು ನೀಡಿದ್ದರೆ ದಿನಾಂಕ ನಮೂದಿಸಿ, ಶೀಲು ಮಾಡುತ್ತಿದ್ದರು ಎಂದರೆ ಅವರು ಶೀಲು ಹಾಕಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

15. ಸಾಮಾನ್ಯವಾಗಿ ವೈದ್ಯಕೀಯ ಅಂಗಡಿಯವರು **prescription** ಇಲ್ಲದೆ ಬಿಲ್ ನೀಡುವುದಿಲ್ಲ ಎಂದರೆ ಸರಿ. ಕೆಲವೊಂದು ಬಿಲ್ಗಳನ್ನು ನಾನು **prescription** ಇಲ್ಲದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಅವುಗಳನ್ನು ಕಳೆದುಕೊಂಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

16. ನಾನು ಒಬ್ಬ ಜವಾಬ್ದಾರಿಯುತ ವಕೀಲನಾಗಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನಗೆ ಜವಾಬ್ದಾರಿ ಇದ್ದರೆ ನಾನು ದಾಖಲಾತಿಗಳನ್ನು ಕಳೆದುಕೊಳ್ಳುತ್ತಿರಲಿಲ್ಲ ಎಂದರೆ ಕೆಲವೊಂದು ಕಳೆದುಹೋಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಜವಾಬ್ದಾರಿ ಇದ್ದಿದ್ದರೆ ನಾನು ಕೆಲವು ದಾಖಲಾತಿಗಳನ್ನು ಕಳೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ.

17. ನಾನು ಸದರಿ ಡಿಸ್ಚಾರ್ಜ್ ಸಮ್ಮರಿಯನ್ನು ಸಮನ್ ಮಾಡಿಸಿಕೊಳ್ಳಲು ನಾನು ಪ್ರಯತ್ನ ಪಟ್ಟಿಲ್ಲ. ಸದರಿ ಡಿಸ್ಚಾರ್ಜ್ ಸಮ್ಮರಿಯಲ್ಲಿ ನಾನು ಆಸ್ಪತ್ರೆಯಲ್ಲಿ ದಾಖಲಾದ ದಿನಾಂಕದಿಂದ ಡಿಸ್ಚಾರ್ಜ್ ಆಗುವ ದಿನಾಂಕ ನಮೂದಾಗಿರುತ್ತದೆ ಎಂದರೆ ಸರಿ. ಅದು ಆಸ್ಪತ್ರೆಯಲ್ಲಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ.

18. ನಾನು ಈವರೆಗೆ ಯಾವುದೇ MVC ಪ್ರಕರಣ ನಡೆಸಿರುವುದಿಲ್ಲ. ಸಾಕ್ಷಿ ಮುಂದುವರಿದು ಈ ಹಿಂದೆ ನಡೆಸಿರುತ್ತೇನೆ, ಈಗ ನಡೆಸಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಂಪೂರ್ಣ ಭಾರತದಲ್ಲಿ ಸಾಮಾನ್ಯವಾಗಿ ಒಂದು ಪೇಷಂಟ್ ಆಸ್ಪತ್ರೆಗೆ ದಾಖಲಾದರೆ ಡಿಸ್ಚಾರ್ಜ್ ಸಮ್ಮರಿಯನ್ನು ಪೇಷಂಟ್ ಗೆ ಕೈಗೆ ಕೊಡುತ್ತಾರೆ ಎಂದರೆ ನಮಗೆ ಕೊಟ್ಟಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಪ್ರಯತ್ನ

ಪಡುತ್ತೇನೆ, ಕೊಟ್ಟರೆ ತಂದು ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಒಬ್ಬ ಜಾವಾಬ್ದಾರಿಯುತ ವಕೀಲನಾಗಿದ್ದು, ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಅಪಘಾತವಾದ ದಿನಾಂಕ ನಾನು ಹುಣಸೂರಿನಿಂದ ಹೊಸೂರು ಕೊಡಗು ಕಾಲೋನಿಗೆ ಹೋಗುತ್ತಿದ್ದೆ. ನನ್ನ ವಾಹನ ಬಜಾಜ್ ಡಿಸ್ಕವರಿ ಆಗಿರುತ್ತದೆ. ನನ್ನ ಬೈಕಿನ ವೀಲ್-ಬೇಸ್-ನಿಂದ ನನ್ನ ಹ್ಯಾಂಡಲ್ ಮೀರರ್ ನ ಅಂದಾಜು ಎತ್ತರ 1 ½ - 2 ಅಡಿ ಇರುತ್ತದೆ. ನಾನು ಬೈಕುಗಳನ್ನು ನೋಡಿರುತ್ತೇನೆ.

20. ನನ್ನ ವಾಹನದ ಬಲಗಡೆ ಇಂಡಿಕೇಟರ್ ಗ್ಲಾಸ್, ಮುಂದುಗಡೆ ಮಡ್ ಗಾರ್ಡ್ ತರಚಿತ್ತ, ಪೆಟ್ರೋಲ್ ಟ್ಯಾಂಕ್ ಬಲಭಾಗ ತರಚಿತ್ತು, ಹಿಂದುಗಡೆ ಬಲಭಾಗದ ಇಂಡಿಕೇಟರ್ ಕೂಡ ಜಖಂ ಆಗಿತ್ತು. ಕಾರಿನ ಎಡಭಾಗದ ಮೀರರ್ ಗೆ ನನ್ನ ವಾಹನ ಟಚ್ ಆಗಿತ್ತು. ಕಾರಿನ ಮೀರರ್ ಎತ್ತರ ಎಷ್ಟಿದೆ ನನಗೆ ಗೊತ್ತಿಲ್ಲ. ನಾನು ಬಿ ಬಿ ಎಮ್ ಮಾಡಿರುತ್ತೇನೆ.

21. ಅಪಘಾತವಾದ ದಿನ ನನ್ನ ಬೈಕಿನ ಗ್ಲಾಸ್ ಗೆ ಕಾರಿನ ಗ್ಲಾಸ್ ಟಚ್ ಆಗಿರುತ್ತದೆ. ನನಗೆ FORCE ಬಗ್ಗೆ ಜ್ಞಾನ ಇಲ್ಲ. ನಾನು ಮೇಲೆ ಹೇಳಿದ ಹಾಗೆ ನನ್ನ ಬೈಕಿನ ಗ್ಲಾಸ್ ಗೆ ಕಾರಿನ ಗ್ಲಾಸ್ ಟಚ್ ಆಗಿದ್ದರೆ, FORCE ನಿಯಮದ ಪ್ರಕಾರ ಯಾವ ಬದಿಗೆ FORCE ಬೀಳುತ್ತದೋ ಅದರ ನಾನು ವಿರುದ್ಧ ದಿಕ್ಕಿಗೆ ಬೀಳಬೇಕಾಗಿತ್ತು ಎಂದರೆ ನಾನು ಎಡಭಾಗಕ್ಕೆ ಬಿದ್ದಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಎಡಭಾಗಕ್ಕೆ ಬಿದ್ದಿದ್ದರೆ ನನ್ನ ವಾಹನದ ಎಡಭಾಗ ಜಖಂ ಗೊಳ್ಳಬೇಕಾಗಿತ್ತು ಎಂದರೆ ಸುಳ್ಳು.

22. ವೇಣುಕುಮಾರ್ ಅವರು ರತ್ನಪುರಿಯವರಾಗಿರುತ್ತಾರೆ. ಈ ಬಗ್ಗೆ ನನಗೆ ಆಮೇಲೆ ಗೊತ್ತಾಗಿರುತ್ತದ. ಹೊಸೂರು ಕೊಡಗು ಕಾಲೋನಿಯಿಂದ ರತ್ನಪುರಿ 5

ಕಿ.ಮೀ. ಅಂತವಿರುತ್ತದೆ. ಸದರಿ ವೇಣುಕುಮಾರ್ ನನ್ನ ಆತ್ಮೀಯ ಸ್ನೇಹಿತ ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ನಾನು , ವೇಣುಕುಮಾರ್ ಹಾಗೂ ಜೈನುಲ್ ಅಬಿದ್ದೀನ್ ಅವರು ಸೇರಿಕೊಂಡು ಸುಳ್ಳು ಪ್ರಕರಣ ದಾಖಲಿಸಿ, ಪರಿಹಾರ ಧನ ಕೋರಿರುತ್ತೇವೆ ಎಂದರೆ ಸುಳ್ಳು.

23. ನನಗೆ ಸದರಿ ವೇಣುಕುಮಾರ್ ಅವರ ವಾಹನದಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತವು ನಾನೇ ಸ್ವತಃ ಬಿದ್ದಿರುವುದರಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ನನ್ನ ಬಲಗೈಗೆ ಏಟಾಗಿರುತ್ತದೆ. ನೀವು ತೂಕ ಜಾಸ್ತಿಯಾ ಅಥವಾ ನಿಮ್ಮ ವಾಹನದ ತೂಕ ಜಾಸ್ತಿಯಾ ಎಂಬ ಪ್ರಶ್ನೆಗೆ ನನ್ನ ತೂಕವೇ ಜಾಸ್ತಿ ಎಂದು ಸಾಕ್ಷಿ ನುಡಿಯುತ್ತಾರೆ. ನಾನು 200 ಕೆ.ಜಿ. ಇದ್ದೀನಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಪಘಾತ ಸಮಯ ನನ್ನ ತೂಕ 72 ಕೆ.ಜಿ ಇತ್ತು. ನನ್ನ ಬೈಕಿನ ಸಿ.ಸಿ.110. ಅಂದರೆ ನನ್ನ ವಾಹನದ ತೂಕ 110 ಕೆ.ಜಿ. ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

24. ಸಾಮಾನ್ಯವಾಗಿ ದ್ವಿಚಕ್ರ ವಾಹನ ಚಾಲನೆ ಮಾಡುವಾಗ ನಾವು ಸದರಿ ವಾಹನದ ಮೇಲೆ ಕುಳಿತಿರುತ್ತೇವೆ ಎಂದರೆ ಸರಿ. ಎಕ್ಸಲರೇಟರ್ ಕೊಟ್ಟಾಗ ಅಸೆಲರೇಷನ್ ವ್ಯಕ್ತಿಯ ದೇಹಕ್ಕಿಂತ ಮುಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಕಂಪನಿ ಬೈಕುಗಳಾದರೂ ಮೂಮೆಂಟ್ ನಲ್ಲಿ ಇದ್ದಾಗ ವ್ಯಕ್ತಿಯ ದೇಹ ರೆಸ್ಟಿಂಗ್ ಸ್ಟೇಜ್ ನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾಹನ ಬಲಭಾಗ ಬಿತ್ತು, ಆಗ ನಾನು ಬ್ಯಾಲೆನ್ಸ್ ಮಾಡಿಕೊಂಡು ಎಡಭಾಗಕ್ಕೆ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾಹನದ ಬಲಭಾಗದ ಮೀರರ್ ಗೆ ಕಾರಿನ ಎಡಭಾಗದ ಮೀರರ್ ಟಚ್ ಆದಾಗ ನಾನು ಎಡಭಾಗಕ್ಕೆ ಬಿದ್ದಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

25. ಐ ಎಮ್ ವಿ ವರದಿ ಪ್ರಕಾರ ನನ್ನ ಬಜಾಜ್ ಡಿಸ್ಕವರಿ ವಾಹನಕ್ಕೆ ಆದ ಜಖಂಗಳು

*front head light mask damage

* right side scratched

* right side indicator damaged

* right side crash guard scratched ಎಂದು ನಮೂದಾಗಿರುತ್ತದೆ ಎಂದರೆ ಸರಿ. ಕಾರಿನ ಮುಂಭಾಗದ ಎಡಗಡೆ ಮೀರರ್ ಹೊಡೆದುಹೋಗಿರುತ್ತದೆ. ಐಎಮ್ ವಿ ಪರೀಕ್ಷ ೆ ಸವಯ ನಾನು ಹೋಗಿಲ್ಲ. ಆ ಸಮಯ ನಾನು ಆಸ್ಪತ್ರೆಯಲ್ಲಿದ್ದೆ. ಐ ಎಮ್ ವಿ ಇನ್ ಸ್ಪೆಕ್ಟರ್ ಮೇಲೆ ನನಗೆ ದ್ವೇಷ ಇಲ್ಲ.

26. ರೇರ್ ಪೋರ್ಷನ್ ಅಂದರೆ ಯಾವುದು ನನಗೆ ಗೊತ್ತಿಲ್ಲ. ಐ.ಎಮ್.ವಿ ವರದಿ ನಿಪಿ.14 ರಲ್ಲಿ KL-10 AH-9797 ವಾಹನದ left rare view mirror broken ಎಂದು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

<u>ಮುಂದುವರಿದ ಪಾಟೀಸವಾಲುಃ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.